# ಮೌಲಾನ ಆಜಾದ್ ಆಂಗ್ಲ ಮಾದರಿ ಶಾಲೆ, ಚಿಕ್ಕಬಳ್ಳಾಪುರ ಟೌನ್,
# ಚಿಕ್ಕಬಳ್ಳಾಪುರ ತಾಲ್ಲೂಕು ಮತ್ತು ಜಿಲ್ಲೆ– 562101

| | |
|---|---|
| ಪ್ರಾರಂಭವಾದ ವರ್ಷ ದಿನಾಂಕ | 2017–18<br>ದಿನಾಂಕ:16–07–2017 |
| ಸರ್ಕಾರಿ ಆದೇಶ ಸಂಖ್ಯೆ | ಎಂಡಬ್ಲ್ಯೂಡಿ 2014 ಎಂಡಿಎಸ್ 2017 ದಿನಾಂಕ:20–06–2017 |
| ಕಟ್ಟಡದ ವಿಸ್ತೀರ್ಣ | ಪೂರ್ವ + ಪಶ್ಚಿಮ– 65 ಅಡಿ<br>ಉತ್ತರ + ದಕ್ಷಿಣ– 34 ಅಡಿ |
| ಅಕ್ಷಾಂಶ–ರೇಖಾಂಶ | Lat N $13^0$26’14.2764’’<br>Long E $77^0$ 43’32.0664’’ |
| ಮಂಜೂರಾತಿಯಾದ ವಿದ್ಯಾರ್ಥಿಗಳ ಸಂಖ್ಯೆ | 300 |
| ಪ್ರಸ್ತುತ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | 136 |
| ಬೋಧಿಸಲಾದ ತರಗತಿಗಳು | 6 ರಿಂದ 9ನೇ ತರಗತಿ |
| ಬೋಧನಾ ಮಾಧ್ಯಮ | ಆಂಗ್ಲ ಮಾಧ್ಯಮ |




**ವಿವರಣೆ**

ನಮ್ಮ ಶಾಲೆಯಾದ ಮೌಲನಾ ಆಜಾದ್ ಆಂಗ್ಲ ಮಾದರಿ ಶಾಲೆಯು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುವಂತ ಶಾಲೆಯಾಗಿದ್ದು, ಈ ಶಾಲೆಯನ್ನು ದಿನಾಂಕ:16–07–2018 ರಂದು ಪ್ರಾರಂಭಿಸಲಾಯಿತು. ಪ್ರಸ್ತುತ 136 ವಿದ್ಯಾರ್ಥಿಗಳು ಈ ಶಾಲೆಯಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ಸದರಿ ಶೈಕ್ಷಣಿಕ ಸಾಲಿನಡಿಯಲ್ಲಿ 6 ರಿಂದ 9ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿದ್ದಾರೆ. ಈ ಶಾಲೆಯಲ್ಲಿ ಉತ್ತಮ ಹಾಗೂ ನುರಿತ ಗುಣಮಟ್ಟದ ಅತಿಥಿ ಶಿಕ್ಷಕರು ಇದ್ದು, ಇವರ ವಿಷಯವಾರು ಬೋಧನೆಯನ್ನು ಶಿಸ್ತುಬದ್ಧವಾಗಿ, ಕ್ರಮಬದ್ಧವಾಗಿ ಬೋಧನೆಯನ್ನು ನೀಡಲಾಗುತ್ತಿದೆ. ಪಠ್ಯ ಪುಸ್ತಕಗಳು, ಶೂ, ಸಮವಸ್ತ್ರ, ಪಠ್ಯ ಪುಸ್ತಕಗಳು ನೋಟ್ ಬುಕ್‌ಗಳು ಉಚಿತವಾಗಿ ನೀಡಲಾಗುತ್ತಿದೆ.

ವಿದ್ಯಾರ್ಥಿಗಳನ್ನು ಶೈಕ್ಷಣಿಕವಾಗಿ, ಮಾನಸಿಕವಾಗಿ, ದೈಹಿಕವಾಗಿ ಸದೃಡವಾಗಿ ಮಾಡುವ ಗುರಿಯೊಂದಿಗೆ ಶಾಲೆ ಕಾರ್ಯಪ್ರವೃತ್ತವಾಗಿದೆ. ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರಗತಿಗಾಗಿ ಕಾಲಕಾಲಕ್ಕೆ ನಿಯಮಿತವಾಗಿ ವಿಷಯವಾರು ಘಟಕ ಪರೀಕ್ಷೆಗಳು ಮೌಖಿಕ ಪರೀಕ್ಷೆಗಳನ್ನು ಮಾಡಲಾಗುತ್ತದೆ. ಶಾಲೆಯಲ್ಲಿ ವಿವಿಧ ರೀತಿಯಾಗಿ ಪಠ್ಯೇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಮುಕ್ತವಾದ ಭಾಗವಹಿಸಲು ಅವಕಾಶಗಳನ್ನು ಸದಾ ಆಯೋಜಿಸುತ್ತಿರುತ್ತಾರೆ. ವಿವಿಧ ಆರೋಗ್ಯಕರ ಸ್ಪರ್ಧೆಗಳಾದ ಆಶುಭಾಷಣ ಸ್ಪರ್ಧೆ, ಚಿತ್ರ ರಚಿಸುವ ಸ್ಪರ್ಧೆ, ಪ್ರಬಂಧ ಬರೆಯುವ ಸ್ಪರ್ಧೆ, ಗಾಯನ ಸ್ಪರ್ಧೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಸ್ಪರ್ಧೆಗಳು ಹಾಗೂ ಶಾಲೆಯಲ್ಲಿ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ವಿದ್ಯಾರ್ಥಿಗಳಿಗೆ ಪ್ರೇರೇಪಿಸಲಾಗುತ್ತಿದೆ. ಮಕ್ಕಳ ಜ್ಞಾನಾರ್ಜನೆಗೆ ಕಲೆಯನ್ನು ಹೆಚ್ಚಿಸಲು ಲೈಬ್ರರಿ ಕೊಠಡಿಗಳನ್ನು ಸಹ ಒದಗಿಸಲಾಗಿದೆ. ನಮ್ಮ ಶಾಲೆಯ ವಿದ್ಯಾರ್ಥಿಗಳು ಜಿಲ್ಲಾ ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಿರುತ್ತಾರೆ. ಅಂತಿಮವಾಗಿ ಮೌಲನಾ ಆಜಾದ್ ಆಂಗ್ಲ ಮಾದರಿ ಶಾಲೆಯನ್ನು ಅತ್ಯುತ್ತಮ ಮಾದರಿ ಶಾಲೆಯನ್ನಾಗಿ ಮಾಡಲು ಪ್ರಯತ್ನಿಸಲಾಗುತ್ತಿದೆ.